

## ತುಳಸಿ ಮತ್ತು ಗ್ರೀನ್‌ಟೀ

ಒಮ್ಮೆ ಶಿಷ್ಯನೊಬ್ಬ ತನ್ನ ಗುರುಗಳಿಗೆ, 'ಸ್ವಾಮಿ, ನೀವು ಇಷ್ಟು ಎತ್ತರದ ಪರ್ವತದ ಗುಹೆಯಲ್ಲಿ ಜೀವನ ಮಾಡುತ್ತೀರಿ. ಈ ಹವಾಮಾನ ವೈಪರಿತ್ಯದಲ್ಲಿ ಹೇಗೆ ಇಷ್ಟು ಉತ್ಸಾಹದಿಂದ ಇರುತ್ತೀರಿ? ಇದರ ರಹಸ್ಯವೇನು?' ಎಂದು ಕೇಳಿದ. ಶಿಷ್ಯನ ಪ್ರಶ್ನೆಗೆ ಮುಗುಳ್ನಕ್ಕ ಗುರುಗಳು, 'ಏನಿಲ್ಲ, ತುಳಸಿ ಮತ್ತು ಗ್ರೀನ್ ಟೀಗಳಿಂದ ನಾನು ಹೀಗಿದ್ದೇನೆ. ಅದು ಸರಿ, ಶಿಷ್ಯ ನಿನಗೆ ಈಗ ಕುಡಿಯಲು ಏನು ಕೊಡಲಿ' ಎಂದು ಕೇಳಿದರು. ಶಿಷ್ಯ, 'ನನಗೆ ತುಳಸಿ, ಗ್ರೀನ್ ಟೀ ಇರಲಿ' ಎಂದ. ಗುರುಗಳು, 'ತುಳಸಿ, ಟೀ ತೊಗೊಂಡು ಬಾ' ಎಂದರು. ಶಿಷ್ಯ ಗೊಂದಲಗೊಂಡ. ಸ್ವಲ್ಪ ಹೊತ್ತಿನಲ್ಲಿ ಮಹಿಳೆಯೊಬ್ಬರು ಗ್ರೀನ್ ಟೀ ತಂದರು. ಶಿಷ್ಯ, 'ಇವರು ಯಾರು?' ಎಂದ. ಗುರುಗಳು, 'ಇವಳು ತುಳಸಿ, ನನ್ನ ಹೆಂಡತಿ ಕಣಯ್ಯಾ' ಎಂದರು!

**ಅರ್ಚನಾ ವಿ. ರಾವ್**

## ಹಾರಿ ಹೋಗಿದೆ

ಚಿತ್ರಕಲಾ ಶಿಕ್ಷಕರೊಬ್ಬರು ವಿದ್ಯಾರ್ಥಿಗಳಿಗೆ ತಮ್ಮ ನೆಚ್ಚಿನ ಪಕ್ಷಿ ಅಥವಾ ಪ್ರಾಣಿಯ ಚಿತ್ರ ಬಿಡಿಸಿಕೊಂಡು ಬರುವಂತೆ ಹೇಳಿದರು. ಮಾರನೇ ದಿನ ಚಿತ್ರಕಲೆಯ ತರಗತಿ ಆರಂಭವಾಗುತ್ತಿದ್ದಂತೆ ಎಲ್ಲರೂ ತಂತಮ್ಮ ಚಿತ್ರಗಳನ್ನು ಹೊರಗೆ ತೆಗೆದಿಟ್ಟುಕೊಂಡು ಕುಳಿತರು. ಶಿಕ್ಷಕರು ಪ್ರತಿ ವಿದ್ಯಾರ್ಥಿಯನ್ನು ಕರೆದು ಅವರು ತೆಗೆದ ಚಿತ್ರಗಳನ್ನು ನೋಡುತ್ತಿದ್ದರು. ಕಡೆಗೆ ಸೋಮಾರಿ, ಮಾತಿನಮಲ್ಲಿ ಪುಟ್ಟಿಯ ಸರದಿ ಬಂತು. 'ಪುಟ್ಟಿ, ನಿನ್ನ ಚಿತ್ರ ತೆಗೆದುಕೊಂಡು ಬಾ' ಎಂದು ಶಿಕ್ಷಕರು ಹೇಳಿದರು. ಪುಟ್ಟಿ ತನ್ನ ಚಿತ್ರವನ್ನು ಅವರ ಮುಂದೆ ಹಿಡಿದಳು. 'ಇದೇನು ಪುಟ್ಟಿ, ಖಾಲಿ ಹಾಳೆ ತೋರಿಸುತ್ತಿದ್ದೀಯ?' ಎಂದರು ತುಸು ಸಿಟ್ಟಿನಿಂದ. 'ನಾನು ರಾತ್ರಿನೇ ಕೋಗಿಲೆ ಬಿಡಿಸಿದ್ದೆ ಸರ್, ಬೆಳಿಗ್ಗೆದ್ದು ಅದು ಆಹಾರ ಹುಡುಕಿಕೊಂಡು ಹೋಗಿದೆ. ನಾನೇನು ಮಾಡಲಿ?' ಎಂದಾಗ ಅವರ ಸಿಟ್ಟು ಮರೆಯಾಗಿ ನಗು ಮೂಡಿತು.

**ಮಲ್ಲಿಕಾರ್ಜುನ ಬಗಲಿ**

